## 1. ಘಟಕಾವಾರು ಅಂಕ ಹಂಚಿಕೆ  7th 1st sem ಸಮಾಜ  2. ಉದ್ದೇಶವಾರು ಅಂಕ ಹಂಚಿಕೆ

| ಕ್ರ. ಸಂ | ಘಟಕ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಜಗತ್ತಿನ ಪ್ರಮುಖ ಘಟನೆಗಳು | 2 | 2 | 5% |
| 2 | ಮಧ್ಯಯುಗದ ಯುರೋಪ್ | 2 | 2 | 5% |
| 3 | ಭಾರತಕ್ಕೆ ಐರೋಪ್ಯರ ಆಗಮನ | 1 | 1 | 2.5% |
| 4 | 18ನೆಯ ಶತಮಾನದ ಭಾರತ | 1 | 2 | 5% |
| 5 | ಬ್ರಿಟಿಷ್ ಪ್ರಾಬಲ್ಯದ ಬೆಳವಣಿಗೆ | 2 | 6 | 15% |
| 6 | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು | 1 | 2 | 5% |
| 7 | ಮೈಸೂರು ಮತ್ತು ಇತರ ಸಂಸ್ಥಾನಗಳು | 3 | 5 | 12.5% |
| 8 | ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ | 4 | 4 | 10% |
| 9 | ಕೇಂದ್ರ ಸರ್ಕಾರ | 1 | 2 | 5% |
| 10 | ರಾಜ್ಯ ಸರ್ಕಾರ | 2 | 2 | 5% |
| 11 | ಭಾರತದ ಪ್ರಾಕೃತಿಕ ವಿಭಾಗಗಳು | 1 | 4 | 10% |
| 12 | ಉತ್ತರ ಅಮೆರಿಕ | 2 | 4 | 10% |
| 13 | ದಕ್ಷಿಣ ಅಮೆರಿಕ | 2 | 4 | 10% |
| | **ಒಟ್ಟು** | **24** | **40** | **100%** |

| ಕ್ರ. ಸಂ | ಉದ್ದೇಶಗಳು | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಜ್ಞಾನ | 9 | 10 | 25% |
| 2 | ತಿಳಿವಳಿಕೆ | 11 | 18 | 45% |
| 3 | ಅಭಿವ್ಯಕ್ತಿ /ಅನ್ವಯ | 3 | 8 | 20% |
| 4 | ಪ್ರಶಂಸೆ / ಕೌಶಲ | 1 | 4 | 10% |
| | **ಒಟ್ಟು** | **24** | **40** | 100% |

## 3. ಪ್ರಶ್ನಾವಾರು ಅಂಕ ಹಂಚಿಕೆ

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ವಸ್ತುನಿಷ್ಠ ಪ್ರಶ್ನೆ | 8 | 8 | 20% |
| 2 | ಕಿರು ಉತ್ತರ ಪ್ರಶ್ನೆ | 14 | 24 | 60% |
| 3 | ದೀರ್ಘ ಉ. ಪ್ರಶ್ನೆ | 2 | 8 | 20% |
| | **ಒಟ್ಟು** | 24 | 40 | 100% |

## 4. ಕಠಿಣತಾವಾರು ಅಂಕ ಹಂಚಿಕೆ

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಸರಳ | 8 | 8 | 20% |
| 2 | ಸಾಧಾರಣ | 14 | 24 | 60% |
| 3 | ಕಠಿಣ | 2 | 8 | 20% |
| | **ಒಟ್ಟು** | 24 | 40 | 100% |

# ನೀಲನಕಾಶೆ

| ಕ್ರ ಸಂ | ಉದ್ದೇಶಗಳು / ಘಟಕಗಳು | ಜ್ಞಾನ | | | ತಿಳಿವಳಿಕೆ | | | ಅಭಿವ್ಯಕ್ತಿ/ಅನ್ವಯ | | | ಪ್ರಶಂಸೆ/ಕೌಶಲ | | | ಒಟ್ಟು | |
|---|---|---|---|---|---|---|---|---|---|---|---|---|---|---|---|
| | | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ಪ್ರಶ್ನೆ | ಅಂಕ |
| 1 | ಜಗತ್ತಿನ ಪ್ರಮುಖ ಘಟನೆಗಳು | 1(1) | 1(1) | | | | | | | | | | | 2 | 2 |
| 2 | ಮಧ್ಯಯುಗದ ಯುರೋಪ್ | 1(1) | 1(1) | | | | | | | | | | | 2 | 2 |
| 3 | ಭಾರತಕ್ಕೆ ಐರೋಪ್ಯರ ಆಗಮನ | | 1(1) | | | | | | | | | | | 1 | 1 |
| 4 | 18ನೆಯ ಶತಮಾನದ ಭಾರತ | | | | | 1(2) | | | | | | | | 1 | 2 |
| 5 | ಬ್ರಿಟಿಷ್ ಪ್ರಾಬಲ್ಯದ ಬೆಳವಣಿಗೆ | | | | | | | | 1(2) | | | | 1(4) | 2 | 6 |
| 6 | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು | | | | | 1(2) | | | | | | | | 1 | 2 |
| 7 | ಮೈಸೂರು ಮತ್ತು ಇತರ ಸಂಸ್ಥಾನಗಳು | 1(1) | | | | 1(2)<br>1(2) | | | | | | | | 3 | 5 |
| 8 | ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ | | | | 4(1) | | | | | | | | | 4 | 4 |
| 9 | ಕೇಂದ್ರ ಸರ್ಕಾರ | | | | | | | | 1(2) | | | | | 1 | 2 |
| 10 | ರಾಜ್ಯ ಸರ್ಕಾರ | 1(1) | 1(1) | | | | | | | | | | | 2 | 2 |
| 11 | ಭಾರತದ ಪ್ರಾಕೃತಿಕ ವಿಭಾಗಗಳು | | | | | | | | | 1(4) | | | | 1 | 4 |
| 12 | ಉತ್ತರ ಅಮೆರಿಕ | | 1(2) | | | 1(2) | | | | | | | | 2 | 4 |
| 13 | ದಕ್ಷಿಣ ಅಮೆರಿಕ | | | | | 1(2)<br>1(2) | | | | | | | | 2 | 4 |
| | | **4(4)** | **5(6)** | | **4(4)** | **7(14)** | | | **2(4)** | **1(4)** | | | **1(4)** | **24** | |
| | **ಒಟ್ಟು** | **9(10)** | | | **11(18)** | | | **3(8)** | | | **1(4)** | | | | **40** |

**ಸೂಚನೆ :–** 1.ವ= ವಸ್ತುನಿಷ್ಠ ಪ್ರಶ್ನೆ, ಕಿ= ಕಿರುಉತ್ತರ ಪ್ರಶ್ನೆ, ದೀ= ದೀರ್ಘ ಉತ್ತರ ಪ್ರಶ್ನೆ 2.ಪ್ರಶ್ನೆ(ಅಂಕ)

**ತರಗತಿ:7** **ಪ್ರಶ್ನಾವಾರು ವಿಶ್ಲೇಷಣೆ** **ವಿಷಯ :ಸಮಾಜ**

| ಪ್ರಶ್ನೆ ಸಂ. | ಘಟಕ | ಉದ್ದಿಷ್ಟ | ನಿರ್ದಿಷ್ಟ | ಅಂಕ | ಪ್ರಶ್ನೆಯ ರೂಪ | ಕ್ಲಿಷ್ಟತೆ | ಸಮಯ |
|---|---|---|---|---|---|---|---|
| 1 | ಜಗತ್ತಿನ ಪ್ರಮುಖ ಘಟನೆಗಳು | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 2 | ಮಧ್ಯಯುಗದ ಯುರೋಪ್ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 3 | ಮೈಸೂರು ಮತ್ತು ಇತರ ಸಂಸ್ಥಾನಗಳು | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 4 | ರಾಜ್ಯ ಸರ್ಕಾರ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 5 | ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ | ತಿಳಿವಳಿಕೆ | ಹೊಂದಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 6 | ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ | ತಿಳಿವಳಿಕೆ | ಹೊಂದಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 7 | ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ | ತಿಳಿವಳಿಕೆ | ಹೊಂದಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 8 | ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ | ತಿಳಿವಳಿಕೆ | ಹೊಂದಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 9 | ಜಗತ್ತಿನ ಪ್ರಮುಖ ಘಟನೆಗಳು | ತಿಳಿವಳಿಕೆ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸುಲಭ | 2 |
| 10 | ಮಧ್ಯಯುಗದ ಯುರೋಪ್ | ತಿಳಿವಳಿಕೆ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸುಲಭ | 2 |
| 11 | ಭಾರತಕ್ಕೆ ಐರೋಪ್ಯರ ಆಗಮನ | ತಿಳಿವಳಿಕೆ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸುಲಭ | 2 |
| 12 | ರಾಜ್ಯ ಸರ್ಕಾರ | ತಿಳಿವಳಿಕೆ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸುಲಭ | 2 |
| 13 | 18ನೆಯ ಶತಮಾನದ ಭಾರತ | ತಿಳಿವಳಿಕೆ | ವಿವರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 14 | ಬ್ರಿಟಿಷ್ ಪ್ರಾಬಲ್ಯದ ಬೆಳವಣಿಗೆ | ಅನ್ವಯ | ಸಮರ್ಥಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 15 | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು | ತಿಳಿವಳಿಕೆ | ವಿವರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 16 | ಮೈಸೂರು ಮತ್ತು ಇತರ ಸಂಸ್ಥಾನಗಳು | ತಿಳಿವಳಿಕೆ | ವಿವರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 17 | ಮೈಸೂರು ಮತ್ತು ಇತರ ಸಂಸ್ಥಾನಗಳು | ತಿಳಿವಳಿಕೆ | ವಿವರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 18 | ದಕ್ಷಿಣ ಅಮೆರಿಕ | ತಿಳಿವಳಿಕೆ | ವಿವರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 19 | ಉತ್ತರ ಅಮೆರಿಕ | ಜ್ಞಾನ | ಸ್ಮರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 20 | ಕೇಂದ್ರ ಸರ್ಕಾರ | ಅನ್ವಯ | ಆಲೋಚಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 21 | ದಕ್ಷಿಣ ಅಮೆರಿಕ | ತಿಳಿವಳಿಕೆ | ಕಾರಣೀಕರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 22 | ಉತ್ತರ ಅಮೆರಿಕ | ತಿಳಿವಳಿಕೆ | ಕಾರಣೀಕರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 23 | ಭಾರತದ ಪ್ರಾಕೃತಿಕ ವಿಭಾಗಗಳು | ಅನ್ವಯ | ವಿವರಿಸುತ್ತಾನೆ | 4 | ಪ್ರಬಂಧ ಮಾದರಿ | ಕಠಿಣ | 8 |
| 24 | ಬ್ರಿಟಿಷ್ ಪ್ರಾಬಲ್ಯದ ಬೆಳವಣಿಗೆ | ಕೌಶಲ | ರಚಿಸುತ್ತಾನೆ | 4 | ಪ್ರಬಂಧ ಮಾದರಿ | ಕಠಿಣ | 8 |

# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ __________ ___________ ತಾಲ್ಲೂಕು.

ಸಂಕಲನಾತ್ಮಕ ಮೌಲ್ಯಮಾಪನ–1 ಸೆಪ್ಟಂಬರ್–2023 ಅಂಕಗಳು :–40

ತರಗತಿ : 7ನೇ ವಿಷಯ : ಸಮಾಜ ವಿಜ್ಞಾನ ಅವಧಿ :– 90ನಿ

---

**I. ಸೂಕ್ತ ಪದಗಳಿಂದ ಬಿಟ್ಟ ಸ್ಥಳವನ್ನು ಭರ್ತಿಮಾಡಿ.** $4 \times 1 = 4$

1. ಕ್ರೈಸ್ತ ಮತದ ಮೂಲ ಗ್ರಂಥ __________
2. ಕಾನ್‌ಸ್ಟಂಟಿನೋಪಲಿನ ಇಂದಿನ ಹೆಸರು __________
3. ಭಾರತ ರತ್ನ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ __________
4. ಶಿಕ್ಷಕರ ಪ್ರತಿನಿಧಿಗಳು __________ ಸದನದ ಸದಸ್ಯರು

**II. ಹೊಂದಿಸಿ ಬರೆಯಿರಿ.** $4 \times 1 = 4$

| | |
|---|---|
| 5. ಗುರು ನಾನಕ್ | ಸೂಫಿ ಸಂತ |
| 6. ಚೈತನ್ಯ | ಸಿಖ್ ಧರ್ಮ |
| 7. ನಿಜಾ ಮುದ್ದಿನ್ ಔಲಿಯ | ಕಲಿಯುಗದ ರಾಧ |
| 8. ಮೀರಾಬಾಯಿ | ಹರೇ ಕೃಷ್ಣ ಪಂಥ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** $4 \times 1 = 4$

9. ಮಹಮ್ಮದ್ ಪೈಗಂಬರ್ ಎಲ್ಲಿ ಜನಿಸಿದರು ?
10. ಪುನರುಜ್ಜೀವನ ಎಲ್ಲಿ ಆರಂಭವಾಯಿತು ?
11. ದಸ್ತಕ್ ಗಳೆಂದರೇನು ?
12. ದ್ವಿಸದನ ಪದ್ಧತಿ ಎಂದರೇನು ?

**IV. ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ** $10 \times 2 = 20$

13. ಪೇಶ್ವೆ ಒಂದನೆಯ ಬಾಜಿರಾವ್‌ನ ಸಾಧನೆಗಳನ್ನು ತಿಳಿಸಿರಿ.
14. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯು ನ್ಯಾಯಬದ್ಧವಾಗಿರಲಿಲ್ಲ ? ಸಮರ್ಥಿಸಿ.
15. ಪಾಶ್ಚಾತ್ಯ ಶಿಕ್ಷಣದ ಪರಿಣಾಮಗಳನ್ನು ತಿಳಿಸಿರಿ.
16. ನಾಲ್ವಡಿ ವೆಂಕಟಪ್ಪ ನಾಯಕನ ಸಾಧನೆಯ ಕುರಿತು ಟಿಪ್ಪಣಿ ಬರೆಯಿರಿ.
17. ಚಿಕ್ಕದೇವರಾಜ ಒಡೆಯರ ಜನಮುಖಿ ಸಾಧನೆಗಳನ್ನು ವಿವರಿಸಿ.
18. ದಕ್ಷಿಣ ಅಮೆರಿಕಾದ ಸ್ಥಾನ ಮತ್ತು ವಿಸ್ತೀರ್ಣಗಳನ್ನು ತಿಳಿಸಿರಿ
19. ಉತ್ತರ ಅಮೆರಿಕಾದ ಪ್ರಮುಖ ನದಿಗಳನ್ನು ಪಟ್ಟಿ ಮಾಡಿರಿ.
20. ನೀನು ಲೋಕಸಭಾ ಸದಸ್ಯನಾಗಲು ಇಚ್ಛಿಸಿದಲ್ಲಿ ನಿನಗೆ ಇರಬೇಕಾದ ಅರ್ಹತೆಗಳೇನು?
21. ದಕ್ಷಿಣ ಅಮೆರಿಕ ಖಂಡದ ಸ್ಥಳೀಯರನ್ನು ರೆಡ್ ಇಂಡಿಯನ್ಸ್ ಎಂದು ಏಕೆ ಕರೆಯುತ್ತಾರೆ?
22. ಉತ್ತರ ಅಮೆರಿಕ ಖಂಡವನ್ನು ಪ್ರೈರೀಸ್‌ಗಳ ನಾಡು ಎಂದು ಏಕೆ ಕರೆಯುತ್ತಾರೆ?

**V. ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯದಲ್ಲಿ ಉತ್ತರಿಸಿ** $2 \times 4 = 8$

23. ನಿಮ್ಮ ಸುತ್ತಲಿನ ಪ್ರದೇಶದ ಪ್ರಾಕೃತಿಕ ಲಕ್ಷಣಗಳು ಸಸ್ಯವರ್ಗ ಮತ್ತು ಬೆಳೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.
24. ಭಾರತದ ಭೂಪಟ ಬಿಡಿಸಿ ಈ ಕೆಳಗಿನ ಸ್ಥಳಗಳನ್ನು ಗುರುತಿಸಿ

ಅ) ದಿಲ್ಲಿ ಆ) ಗೋವಾ

# 7ನೇ ತರಗತಿ ಸಮಾಜ ವಿಜ್ಞಾನ ಮಾದರಿ ಉತ್ತರ ಪತ್ರಿಕೆ

1. ಬೈಬಲ್
2. ಇಸ್ತಾನ್ ಬುಲ್
3. ಸರ್ ಎಂ ವಿಶ್ವೇಶ್ವರಯ್ಯ
4. ವಿಧಾನಪರಿಷತ್ತು
5. ಸಿಖ್ ಧರ್ಮ
6. ಹರೆ ಕೃಷ್ಣ ಪಂಥ
7. ಸೂಫಿಸಂತ
8. ಕಲಿಯುಗದ ರಾಧಾ
9. ಅರಬ್ ದೇಶದ ಮೆಕ್ಕಾ ನಗರದಲ್ಲಿ ಜನಿಸಿದರು
10. ಇಟಲಿಯಲ್ಲಿ ಆರಂಭವಾಯಿತು
11. ಸುಂಕವಿಲ್ಲದೆ ಮುಕ್ತ ವ್ಯಾಪಾರ ನಡೆಸಲು ಬ್ರಿಟಿಷ್ ವರ್ತಕರಿಗೆ ನೀಡಲಾದ ವಿಶೇಷ ಪಾಸುಗಳೇ ದಸ್ತಕ್ ಗಳು
12. ವಿಧಾನಸಭೆ ಮತ್ತು ವಿಧಾನ ಪರಿಷತ್ತು ಎಂಬ ಎರಡು ಸದನಗಳನ್ನು ಒಳಗೊಂಡ ಪದ್ದತಿಯೇ ದ್ವಿಸದನ
13. ಅಧಿಕಾರಕ್ಕೆ ಬಂದಾಗ 20ರ ತರುಣ .ಬಲಿಷ್ಠನು ರಾಜತಂತ್ರ ನಿಪುಣನು ಆಗಿದ್ದನು. ಮೊಘಲರನ್ನು ಸೋಲಿಸಿ ಭಾರತದಲ್ಲಿ ಬೃಹತ್ ಸಾಮ್ರಾಜ್ಯವನ್ನು ಕಟ್ಟುವ ಯೋಜನೆಯನ್ನು ಹಾಕಿಕೊಂಡನು. ಹೈದರಾಬಾದ್ ಆಮೇಲೆ ಮಾಳ್ವ ಗುಜರಾತ್ ಮತ್ತು ಬುಂದೇಲ್ ಖಂಡಗಳನ್ನು ವಶಪಡಿಸಿಕೊಂಡನು.
14. ಪ್ರಾಚೀನ ಕಾಲದಿಂದಲೂ ರಾಜರಿಗೆ ಮಕ್ಕಳಿಲ್ಲದಿದ್ದರೆ ದತ್ತು ಪುತ್ರರನ್ನು ಪಡೆಯುತ್ತಿದ್ದರು ಆದರೆ ಈ ನೀತಿ ದತ್ತು ಸ್ವೀಕಾರ ಪದ್ಧತಿಗೆ ವಿರುದ್ಧವಾಗಿತ್ತು
15. ಪರಂಪರಾನುಗತ ಶಿಕ್ಷಣ ಪದ್ಧತಿಯ ಅವನತಿ.ರಾಷ್ಟ್ರೀಯತೆಯ ಬೆಳೆಸಲು ಸಹಕಾರಿ.ಭಾರತೀಯ ಸಾಹಿತ್ಯದ ಮೇಲೂ ಗಂಭೀರ ಪರಿಣಾಮ.ಹೊಸ ಸಾಹಿತ್ಯಕ ಚಳವಳಿಗಳಿಗೆ ಕಾರಣವಾಯಿತು
16. ವೆಂಕಟಪ್ಪ ನಾಯಕನು ದಕ್ಷಿಣ ಭಾರತದ ರಾಜರನ್ನೆಲ್ಲ ಒಂದುಗೂಡಿಸಿ ಬ್ರಿಟಿಷರ ವಿರುದ್ಧ ಸಮರ ಸಾರಲು ಹವಣಿಕೆಯಲ್ಲಿದ್ದನು ಅರಬ್ ರೋಹಿಲ್ಲಾ ರನ್ನು ಸೈನ್ಯದಲ್ಲಿ ಸೇರಿಸಿಕೊಂಡನು ಅಲ್ಲದೆ ಸೈನ್ಯವನ್ನು ತರಬೇತಿಗೊಳಿಸಲು ಪ್ರಾರಂಭಿಸಿದನು
17. ಚಿಕ್ಕದೇವರಾಜ ಒಡೆಯರು 18 ಶಾಖೆಗಳುಳ್ಳ ಅಠಾರ ಕಚೇರಿಯನ್ನು ತೆರೆದರು. ಶ್ರೀರಂಗಪಟ್ಟಣದ ಬಳಿ ಪಶ್ಚಿಮದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಿ ಕೃಷಿಗೆ ನೀರು ಒದಗಿಸಿದರು ಇವರು ಆಡಳಿತದಲ್ಲಿ ಮಿತವ್ಯಯ ಜಾರಿಗೆ ತಂದು ರಾಜ್ಯದ ಭಂಡಾರವನ್ನು ಶ್ರೀಮಂತ ಗೊಳಿಸಿ ನವಕೋಟಿ ನಾರಾಯಣ ಎಂಬ ಬಿರುದಿದೆ ಪಾತ್ರರಾದರು.
18. ಇದು ಉತ್ತರದಲ್ಲಿ ಅಗಲವಾಗಿಯೂ ಮತ್ತು ದಕ್ಷಿಣದ ಕಡೆಗೆ ಕಿರಿದಾಗಿದ್ದು ತ್ರಿಕೋನಾಕಾರವಾಗಿದೆ. 12 ಡಿಗ್ರಿ ಉತ್ತರ ಅಕ್ಷಾಂಶದಿಂದ 56 ಡಿಗ್ರಿ ದಕ್ಷಿಣ ಅಕ್ಷಾಂಶದ ವರೆಗೂ ಹಾಗೂ 35ಲಿ ಪೂರ್ವ ರೇಖಾಂಶದಿಂದ 81 ಡಿಗ್ರಿ ಪಶ್ಚಿಮ ರೇಖಾಂಶದವರೆಗೂ ವಿಸ್ತರಿಸಿದೆ.
19. ಮಿಸಿಸಿಪಿ ಮಿಸ್ಸೌರಿ ಕೊಲರಾಡೋ ಮೆಕೆಂಜಿ ಪ್ರೇಸರ್
20. ಭಾರತದ ಪ್ರಜೆಯಾಗಿರಬೇಕು ಕನಿಷ್ಠ 25 ವರ್ಷ ವಯಸ್ಸಾಗಿರಬೇಕು ನ್ಯಾಯಾಲಯದಿಂದ ಜೈಲು ಶಿಕ್ಷೆಗೆ ಒಳಗಾಗಿರಬಾರದು ದಿವಾಳಿ ಆಗಿರಬಾರದು
21. ಕ್ರಿಸ್ಟೋಫರ್ ಕೊಲಂಬಸನು ಭೂಖಂಡವನ್ನು ತಲುಪಿ ಅದನ್ನು ಭಾರತವೆಂದು ಭಾವಿಸಿದ ಅಲ್ಲಿನ ಸ್ಥಳೀಯರನ್ನು ರೆಡ್ ಇಂಡಿಯನ್ ರೆಂದು ಕರೆದನು.
22. ಉತ್ತರ ಅಮೇರಿಕಾ ಖಂಡ ಪ್ರಪಂಚದ ಅತಿ ಫಲವತ್ತಾದ ಮೈದಾನಗಳಲ್ಲೊಂದಾಗಿದ್ದು ಉತ್ತಮ ಕೃಷಿ ಪ್ರದೇಶವಾಗಿದೆ ಈ ವಿಶಾಲವಾದ ಹುಲ್ಲುಗಾವಲನ್ನು ಪ್ರೈರಿಸ್ ಎಂತಲೂ ಕರೆಯುತ್ತಾರೆ ಈ ಕಾರಣದಿಂದಾಗಿ ಪ್ರೈರಿ ನಾಡು ಎಂದು ಕರೆಯುವರು
23. ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲಿನ ಪ್ರಾಕೃತಿಕ ಲಕ್ಷಣಗಳು ಸಸ್ಯವರ್ಗ ಹಾಗೂ ಬೆಳೆಗಳನ್ನು ವಿವರಿಸಬೇಕು.
24. ಭಾರತದ ಭೂಪಟ